ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **389 /2021**

| | | |
|---|---|---|
| ಸಾಕ್ಷಿಯ ಹೆಸರು | : ಎನ್ ಈಶ್ವರ್ | ಸಿ.ಡಬ್ಲ್ಯು 15 |
| ತಂದೆಯ ಹೆಸರು | : ಲೇಟ್ ನಾರಾಯಣ | ಪಿ.ಡಬ್ಲ್ಯು 09 |
| ವಯಸ್ಸು | : 59 ವರ್ಷ | |
| ಉದ್ಯೋಗ | : ವಾಹನ ನಿರೀಕ್ಷಕರು, ತರೀಕೆರೆ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ**20-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಕಳೆದ 10 ವರ್ಷಗಳಿಂದ ತರೀಕೆರೆಯಲ್ಲಿ ವಾಹನ ನಿರೀಕ್ಷಕರು ಎಂದು ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ದಿಃ11-05-2020 ರಂದು ತರೀಕೆರೆ ಠಾಣಾ ಅಧಿಕಾರಿಗಳ ಕೋರಿಕೆಯ ಮೇರೆಗೆ ಅದೇ ದಿನ ಮುಂಜಾನೆ 11-30 ಗಂಟೆಗೆ ತರೀಕೆರೆ ಪೊಲೀಸ್ ಠಾಣಾ ಆವರಣಕ್ಕೆ ಭೇಟಿ ಕೊಟ್ಟು ಅಪಘಾತದಲ್ಲಿ ಭಾಗಿಯಾದ ವಾಹನವಾದ ವಾಹನ ಸಂಖ್ಯೆ ಕೆ.ಎ 18 ಇಎ 6008 ನ್ನು ಪರೀಕ್ಷಿಸಿದಾಗ ಹಿಂದಿನ ಎಡಬದಿಯ ಇಂಡಿಕೇಟರ್, ಮುಂದಿನ ಎಡಬದಿಯ ಇಂಡಿಕೇಟರ್ ಗ್ಲಾಸ್, ಮುಂದಿನ ಮಾಸ್ಕ್ ಒಡೆದಿದ್ದವು. ಸ್ಪೀಡೋ ಮೀಟರ್ ಕೇಬಲ್ ಕಳಚಿತ್ತು, ಉಳಿದ ಭಾಗಗಳು ಸುಸ್ಥಿತಿಯಲ್ಲಿದ್ದವು. ಅಡೆ-ತಡೆಗಳು ಸುಸ್ಥಿತಿಯಲ್ಲಿ ಇದ್ದವು. ನನ್ನ ಅಭಿಪ್ರಾಯದಂತೆ ಯಾವುದೇ ಯಾಂತ್ರಿಕ ದೋಷದಿಂದ ಅಪಘಾತ ಆಗಿರುವುದಿಲ್ಲ ಎಂದು ವರದಿ ಕೊಟ್ಟಿರುತ್ತೇನೆ. ವರದಿಯನ್ನು ನಿ.ಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-9(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಅಪಘಾತದಲ್ಲಿಯೇ ಮೇಲೆ ಹೇಳಿದ ವಾಹನಗಳಿಗೆ ಡ್ಯಾಮೇಜ್ ಗಳು ಆಗಿವೆ ಎಂದು ಖಚಿತವಾಗಿ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಆಗುವ ಸಾಧ್ಯತೆಗಳು ಇವೆ ಎನ್ನುತ್ತಾರೆ. ನಾನು ಠಾಣೆಗೆ ಹೋಗಿಲ್ಲ ಮತ್ತು ವಾಹನಗಳ ಪರೀಕ್ಷೆ ಮಾಡಿಲ್ಲ ಎಂದರೆ ಸರಿಯಲ್ಲ. ಯಾಂತ್ರಿಕ ದೋಷದಿಂದ ಅಪಘಾತ ಆಗಿದೆ ಎಂದು ಗೊತ್ತಿದ್ದರೂ ಕೂಡ ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.